ಅ) ಬೆಂಗಳೂರು ಮೈಸೂರು ಮಧ್ಯೆ ಪ್ರತ್ಯೇಕವಾದ ವೇಗದ ಹೆದ್ದಾರಿಯ ನಿರ್ಮಾಣದ ಯೋಜನೆಯು ಸರ್ಕಾರದ ಉನ್ನತಮಟ್ಟದ ಕಮಿಟಿಯ ಪರಿಶೀಲನೆಯಲ್ಲಿದೆ. ಯೋಜನೆಯು ಮಂಜೂರು ಆದ ನಂತರ ಪ್ರಾರಂಭಿಸಲಾಗುವುದು. ಇದಕ್ಕೆ ಸುಮಾರು 200 ಕೋಟಿ ರೂ.ಗಳ ಅಂದಾಜು ಆಗುತ್ತದೆ.

ಇ) ಸುಮಾರು 10 ಕಿ.ಮೀ. ನಷ್ಟು ದೂರ ಕಡಿಮೆ ಆಗುವುದೇ ಅಲ್ಲದೇ ವೇಳೆಯ ಉಳಿತಾಯವೂ ಅಪಘಾತ ರಹಿತವೂ ಆಗುತ್ತದೆ.

ಬೀದರ್ ಜಿಲ್ಲೆಯಲ್ಲಿ ಜಿಲ್ಲಾಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಗೆ ರಸ್ತೆಗಳನ್ನು ತೆಗೆದುಕೊಂಡಿರುವುದರ ಬಗ್ಗೆ.

1908-ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ(ಜೀರಾದ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ಮತ್ತು 1991-92ನೆ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಜಿಲ್ಲಾಪರಿಷತ್ತಿನಿಂದ ಎಷ್ಟು ಕಿ.ಮೀ.ರಸ್ತೆಯನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡಿರುತ್ತಾರೆ (ವಿವರಗಳನ್ನು ನೀಡುವುದು).

ಆ) ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡಿರುವ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕ್ರಮಗಳೇನು.

ಇ) ಮುಂಬರುವ ವರ್ಷದಲ್ಲಿ ಎಷ್ಟು ಕಿಲೋಮೀಟರ್ ರಸ್ತೆಯನ್ನು ಜಿಲ್ಲಾ ಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಯು ವಹಿಸಿಕೊಳ್ಳಲಿದೆ?

ಶ್ರೀ ಜಿ.ಪರಮೇಶ್ವರ್ ನಾಯ್ಕ್ (ಲೋಕೋಪಯೋಗಿ ಸಚಿವರು)

ಅ) 1990-92 ಮತ್ತು 1991-92ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನಿಂದ ಯಾವುದೇ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸುಮಾರು ಒಟ್ಟು 6000 ಕಿ.ಮೀ. ಉದ್ದದ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಿ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಿಂದ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ತೆಗೆದುಕೊಳ್ಳುವ ವಿಷಯವನ್ನು ಶೀಘ್ರದಲ್ಲಿ ತೀರ್ಮಾನಿಸಲಾಗುವುದು.

ಪಶ್ಚಿಮ ಘಟ್ಟ ಯೋಜನೆಯಡಿಯಲ್ಲಿ ಕಲಘಟಗಿ ತಾಲ್ಲೂಕನ್ನು ಸೇರಿಸುವುದರ ಬಗ್ಗೆ.

1910-ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಕಲಘಟಗಿ ತಾಲ್ಲೂಕನ್ನು ಪಶ್ಚಿಮಘಟ್ಟ ಯೋಜನೆಯಡಿಯಲ್ಲಿ ಸೇರಿಸಬೇಕೆಂದು ಧಾರವಾಡ ಜಿಲ್ಲಾ ಪರಿಷತ್ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರವು ಅದರ ಬಗ್ಗೆ ಕೈಗೊಂಡ ಕ್ರಮಗಳೇನು?

ಇ) ಈ ಪ್ರದೇಶವು ಮಲೆನಾಡು ಪ್ರದೇಶ ಹಾಗೂ ಹಿಂಮಳಿದ ಪ್ರದೇಶವಾಗಿರುವುದರಿಂದ ಹಾಗೂ ಗುಡ್ಡಗಾಡು ಪ್ರದೇಶವಾಗಿರುವುದರಿಂದ ಕಲಘಟಗಿ ತಾಲ್ಲೂಕನ್ನು ಪಶ್ಚಿಮಘಟ್ಟ ಯೋಜನೆಯಡಿಯಲ್ಲಿ ಸೇರಿಸಿ ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?